## ನಿಮ್ಮೊಡನೆ

# ಜಲ ಸಂರಕ್ಷಣೆಗೆ ತೆರೆಯಬೇಕಿದೆ ನಮ್ಮ ವಿವೇಕದ ಕಣ್ಣುಗಳನ್ನು...

ಜಲಕ್ಷಾಮದ ಭೀಕರ ಬಹುಮುಖದರ್ಶನ ಬೇಕಾದರೆ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅಡ್ಡಾಡಿ ಬನ್ನಿ. ಆದರೂ ಜೀವಜಲದ ವಿಚಾರದಲ್ಲಿ ಆತಂಕ ಪಡುವಂತಹುದು ಏನೂ ಆಗಿಯೇ ಇಲ್ಲ ಎನ್ನುವ ರೀತಿಯಲ್ಲಿ ಸಮಾಜ ಕುಂಭಕರ್ಣ ನಿದ್ದಿಗೆ ಜಾರಿದೆ.

ಸಕಲ ಜೀವರಾಶಿಯ ಅಸ್ತಿತ್ವಕ್ಕೆ ಆಧಾರವಾಗಿರುವ ನೀರಿನ ವಿಚಾರದಲ್ಲಿ ನಮ್ಮ ಸಮಾಜಕ್ಕೆ ಹಾಗೂ ನಮ್ಮನ್ನು ಆಳುವ ವರ್ಗಕ್ಕೆ ದೃಷ್ಟಿದೋಷ ಆವರಿಸಿದಂತಿದೆ. ಜಲಕ್ಷಾಮದ ಕರಿನೆರಳು ಬೆನ್ನಹಿಂದೆ ಜೋತುಬಿದ್ದಿದ್ದರೂ ಅದು ಕಣ್ಣಿಗೇ ಬಿದ್ದಿಲ್ಲ ಎಂಬಂತಿದ್ದೇವೆ. ಆ ನೆರಳು ಗಾವುದ ದೂರದಲ್ಲೆಲ್ಲೋ ಇರುವಂತೆ ಪರಿಭಾವಿಸಿದ್ದೇವೆ. ಅದರ ಪರಿಣಾಮ ತಕ್ಷಣಕ್ಕೇನೂ ತಟ್ಟುವುದಿಲ್ಲ ಎಂದು ನಮ್ಮನ್ನು ನಾವೇ ನಂಬಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ.

ನೀರಿನ ಬಳಕೆಯ ಪ್ರಮಾಣ ದಿನೇ ದಿನೇ ಹೆಚ್ಚುತ್ತಲೇ ಇದೆ. ಇದರ ನಡುವೆ ಕುಡಿಯಲು ಯೋಗ್ಯವಾದ ನೀರಿನ ಲಭ್ಯತೆಯ ಪ್ರಮಾಣ ಕ್ಷೀಣಿಸುತ್ತಲೇ ಇದೆ. ಭಾರತದಲ್ಲಿ ಈಗಲೂ ಕೋಟ್ಯಂತರ ಜನರಿಗೆ ಸುರಕ್ಷಿತವಾದ ಕುಡಿಯುವ ನೀರಿನ ಲಭ್ಯತೆ ಇಲ್ಲ. ಮಳೆಯ ಋತು ಅಡ್ಡಾದಿಡ್ಡಿಯಾಗಿದೆ. ಮಳೆ ಪ್ರಮಾಣದಲ್ಲೂ ಇಳಿಕೆಯಾಗಿದೆ. ಕೆರೆ–ಕಟ್ಟೆಗಳು ಒತ್ತುವರಿಗೆ ಒಳಗಾಗಿವೆ. ಪಾತಾಳಗಂಗೆಯನ್ನು ಹೊರಗೆ ತರುವ ಭಗೀರಥ ಪ್ರಯತ್ನಗಳು ಹೆಚ್ಚುತ್ತಲೇ ಇವೆ. ಇದರಿಂದಾಗಿ, ಅಂತರ್ಜಲದ ಮಟ್ಟ ಕಳವಳ ಮೂಡಿಸುವ ಮಟ್ಟಿಗೆ ಕೆಳಗೆ ಇಳಿಯುತ್ತಲೇ ಇದೆ. ಅದರ ಭೀಕರ ಬಹುಮುಖದರ್ಶನ ಬೇಕಾದರೆ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಮ್ಮೆ ಅಡ್ಡಾಡಿ ಬನ್ನಿ. ಆದರೂ ಜೀವಜಲದ ವಿಚಾರದಲ್ಲಿ ಆತಂಕ ಪಡುವಂತಹುದು ಏನೂ ಆಗಿಯೇ ಇಲ್ಲ ಎನ್ನುವ ರೀತಿಯಲ್ಲಿ ಸಮಾಜ ಕುಂಭಕರ್ಣ ನಿದ್ದಿಗೆ ಜಾರಿದೆ.

ನೀರಿನ ಸಂರಕ್ಷಣೆ, ಸಮರ್ಪಕ ನಿರ್ವಹಣೆ ಮತ್ತು ಮಿತಬಳಕೆಯ ಅಗತ್ಯ ಮತ್ತು ಅನಿವಾರ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಇಲ್ಲವೆಂದು ಹೇಳುತ್ತಿಲ್ಲ. ಅಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನೀರಿನ ಮಹತ್ವದ ಬಗ್ಗೆ ಜಾಗತಿಕ ಮಟ್ಟದಲ್ಲಿ ಅರಿವು ಮೂಡಿಸುವ ಸಲುವಾಗಿ ವಿಶ್ವ ಜಲ ದಿನ (ಮಾರ್ಚ್ 22) ಆಚರಿಸುತ್ತೇವೆ. ಆದರೆ ಈ ಬಗೆಯ ಕಾರ್ಯಕ್ರಮಗಳಿಂದ ನಮ್ಮಲ್ಲಿ ಆಗಿರುವ ಪರಿಣಾಮ ಮಾತ್ರ ನಗಣ್ಯ! ಅರಿವು ಆಚರಣೆಗೆ ಇಳಿದಿಲ್ಲ ಎಂಬುದಕ್ಕೆ ದಿನನಿತ್ಯ ಹತ್ತಾರು ನಿದರ್ಶನಗಳು ಕಣ್ಣಿಗೆ ಬೀಳುತ್ತವೆ.

ಆರೋಗ್ಯ, ಉತ್ಪಾದಕತೆ ಸೇರಿದಂತೆ ಬದುಕಿನ ಎಲ್ಲ ಆಯಾಮಗಳ ಜತೆಗೂ ನೀರು ತಳಕು ಹಾಕಿಕೊಂಡಿದೆ. ಭಾರತದ ಆರ್ಥಿಕತೆ ಕೃಷಿಯನ್ನೇ ದೊಡ್ಡ ಮಟ್ಟದಲ್ಲಿ ಅವಲಂಬಿಸಿದೆ. ಆದರೆ ನೀರಿನ ಕೊರತೆ ಹಾಗೂ ಪದೇ ಪದೇ ಕಾಡುವ ಬರದಿಂದ ಕೃಷಿ ಕ್ಷೇತ್ರದ ಪ್ರಗತಿ ಕುಂಠಿತಗೊಳ್ಳುತ್ತಿದೆ. ಕೃಷಿಯನ್ನು ನೆಚ್ಚಿಕೊಂಡ ಜನರು, ನಗರಗಳತ್ತ ಮುಖ ಮಾಡಿ, ಆಂತರಿಕ ವಲಸೆ ಎಂಬ ಮತ್ತೊಂದು ಬಗೆಯ ಸಮಸ್ಯೆಗೆ ಕಾರಣರಾಗುತ್ತಿದ್ದಾರೆ. ಆದರೂ ನಮ್ಮ ಕೃಷಿ ಪದ್ಧತಿಯು ಸುಧಾರಣೆಗೆ ತೆರೆದುಕೊಳ್ಳುತ್ತಿಲ್ಲ. ಹೆಚ್ಚು ನೀರು ಬೇಡುವ ಭತ್ತದಂತಹ ಬೆಳೆಗಳಿಗೇ ಜೋತುಬಿದ್ದಿದ್ದೇವೆ. ಬೇಸಾಯದ ಈಗಿನ ಮಾದರಿ ಆಮೂಲಾಗ್ರ ಬದಲಾವಣೆಗೆ ಒಳಗಾಗಬೇಕಾಗಿದೆ. ಆದರೆ, ಅದನ್ನು ಮನದಟ್ಟು ಮಾಡಿಸುವ, ಆಗುಮಾಡುವ ಪ್ರಯತ್ನಗಳು ಇಲ್ಲವಾಗಿವೆ.

ನಗರವಾಸಿಗಳಂತೂ ನೀರು ಪೋಲು ಮಾಡುವುದನ್ನು ತಮ್ಮ ಹಕ್ಕು ಎಂದೇ ಭಾವಿಸಿರುವಂತಿದೆ. ಅಪಾರ್ಟ್‌ಮೆಂಟ್‌ಗಳು, ಈಜುಕೊಳಗಳು, ಹುಲ್ಲುಹಾಸು, ಕಾರು, ಸಾಕುನಾಯಿ... ಇಂದ್ರಲೋಕದ ವೈಭೋಗ. ಪಾತ್ರೆ ಬೆಳಗುವುದಕ್ಕೆ, ಕಾರು ತೊಳೆಯುವುದಕ್ಕೆ ಎಲ್ಲದಕ್ಕೂ ಕುಡಿಯುವ ನೀರೇ ಬೇಕು. ಹೋಗಲಿ, ಮಳೆ ನೀರು ಸಂಗ್ರಹಿಸಿ ಇಟ್ಟುಕೊಳ್ಳಿ. ಅದನ್ನು ಕೈತೋಟಕ್ಕೆ, ಕಾರು ತೊಳೆಯುವುದಕ್ಕೆ ಬಳಸಬಹುದು ಎಂದರೆ ಅದಕ್ಕೂ ಜಗ್ಗದ ಜಡ್ಡುಗಟ್ಟಿದ ಮನಃಸ್ಥಿತಿ. ನಿರ್ದಿಷ್ಟ ಅಳತೆಯ ನಿವೇಶನದಲ್ಲಿ ಕಟ್ಟಿದ ಮನೆಗಳಲ್ಲಿ ಮಳೆನೀರು ಸಂಗ್ರಹ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರ ನೀತಿ ರೂಪಿಸಿದೆ. ಆದರೆ ಅದು ಕಾಗದದಲ್ಲಿ ಮಾತ್ರ ಉಳಿದಿದೆ. ಅನುಷ್ಠಾನದ ವಿಚಾರದಲ್ಲಿ ಸರ್ಕಾರ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿಲ್ಲ. ಪಾಲಿಸುವ ವಿಚಾರದಲ್ಲಿ ನಾಗರಿಕರಲ್ಲಿ ಪ್ರಾಮಾಣಿಕತೆ ಇಲ್ಲ.

ನೀರನ್ನು ಹಿತಮಿತವಾಗಿ ಬಳಸಬೇಕು. ಮರುಬಳಕೆಯ ಸಾಧ್ಯತೆಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಬೇಕು. ಬೆಳೆ ಪದ್ಧತಿಯಲ್ಲಿ ಬದಲಾವಣೆ ತರಬೇಕು. ಜೀವಜಲದ ಪೋಲು ತಡೆಯಬೇಕು. ನೀರಿನ ಪ್ರತಿ ಹನಿಯೂ ಅಮೂಲ್ಯ ಎಂಬ ಸಂದೇಶ ಪ್ರತಿಯೊಬ್ಬರ ನರನಾಡಿಗಳಿಗೆ ಜಿನುಗಬೇಕು. 'ವಿಶ್ವ ಜಲದಿನ'ವು ಈ ವಿಚಾರಗಳತ್ತ ಹೊರಳುನೋಟ ಬೀರಲು ಮತ್ತು ಜೀವನಶೈಲಿ ಬದಲಿಸಿಕೊಳ್ಳಲು ನಮ್ಮನ್ನು ಪ್ರೇರೇಪಿಸಲಿ. ಬೇಸಿಗೆ ಶುರುವಾಗಿದೆ. ಅದರೊಂದಿಗೇ ನೀರಿಗಾಗಿ ಪಡಿಪಾಟಲೂ ಶುರುವಾಗಿದೆ. ಅದು ಮತ್ತಷ್ಟು ತೀವ್ರ ಸ್ವರೂಪ ಪಡೆಯುವ ದಿನಗಳು ದೂರವಿಲ್ಲ. ಆ ದಿನ ಬಾಗಿಲು ಬಡಿಯುವ ಮೊದಲೇ ಎಚ್ಚೆತ್ತುಕೊಳ್ಳುವುದು ಜಾಣಜಾಣೆಯರ ಲಕ್ಷಣ. ಅಂತಹ ಜಾಣತನವನ್ನು ಈ ಕ್ಷಣದಿಂದಲೇ ರೂಢಿಸಿಕೊಳ್ಳೋಣ.



■ ಎನ್. ಉದಯಕುಮಾರ್